# ಕವಿನಾವಿಕನಿಗೆ ಕಿವಿಮಾತು:

## (ಶತಾವಧಾನಿ ಡಾ॥ ರಾ. ಗಣೇಶ್.)

೧. ಇಂದಿನ ಪುಟ್ಟಿನ ಪುರುಡಿಂ
ಮುಂದಕೆ ಪೋಪೊಂದು ಪೂಣ್ಕೆಸಲ್ಗುಮಿದಿರ್ಕೆ -
ನ್ನಂದಿನ ತೆರೆಚಾಪೆಗಳ -
ನ್ನೊಂದಿಸೆಯೇಂ ? ರಟ್ಟೆಗಿರ್ಪ ಕಸುವಕ್ಷಯಮೇ ?

೨. ರಸಭಾವಂಗಳ ಜಲಬಲ
ಮಸಮಾನಂ ನೂಕವೇಳ್ಕುಮೆಂದುಂ ತರಿಯಂ |
ಕಸಿವಿಸಿಯೇತಕಲಂಕೃತಿ
ಯೊಸಗೆಯ ಮೇಗಾಳಿಯೊಲವಿನುಪಕೃತಿಯಾಗಳ್ |

೩. ವಿಪುಲ ವ್ಯಾಸಂಗೋದಿತ
ಸುಪಕ್ವ ಶಬ್ದಾರ್ಥಶಕ್ತಿಯ ಪಟಸ್ತಂಭಂ |
ಉಪಟಳಮೆನಿಪುದೆ ನವತಾ
ಪ್ರಪನ್ನತೆಯನಾಂತ ನಿನ್ನ ಚುಕ್ಕಾಣಿಗಮಾ ||

೪. ಪ್ರತಿಭಾಶ್ವಾಸಂ ಪಿಡಿದತಿ
ಚತುರತೆಯಿಂ ಮುತ್ತನೆತ್ತುವುದು ಸರಿ; ಜತೆಗ -
ದ್ಭುತಪಾಂಡಿತ್ಯದ ಬಲೆಯಂ
ಕೃತಿ ! ನೀಂ ಕೈಗೊಳ್ಳುದೊಳಿತು ನಿತ್ಯಾನ್ನಕಿದೋ ||

೫. ಛಂದೋಗತಿಯನುಸಾರಂ
ಸ್ಪಂದಿಸೆ ಪುಟ್ಟುಗಳಪಾಳಿ, ಗಮನಂ ಸುಕರಂ |
ಚಂದಮೆ ನೌಕಾನರ್ತನ
ಸಂದರ್ಭದೆ ತಾಳಹಾನಿ ? ತಿರ್ಯಕ್ ಪತನಂ?

೬. ಶಿಷ್ಟಪರಂಪರೆಯಿಂದೆ ಸು
ಪುಷ್ಟ ವ್ಯಾಕರಣ ಸಂಸ್ಕೃತಂ ದೃಢಮೆನಿಪು -
ತ್ಕೃಷ್ಟತರುವೆ ದೋಣಿಗೆ ಸರಿ,
ಯಿಷ್ಟದ ಬಣ್ಣವನೆ ಬಳಿಯಲಾನಡ್ಡಿಬರೆನ್ |

೭. ಮರೆಯದಿರೌಚಿತ್ಯ ಕಲಾ
ಸ್ಫುರಣದ ದಿಕ್ಸೂಚಿಯಂ ಪಯಣಿಸುವ ಭರದೊಳ್ |
ತೆರೆ-ನೊರೆ-ಮೊರೆಗಳ ಮೆರೆತಕೆ
ಮರೆಯದಿರಾನಂದಮೆಂಬ ಕರೆಯಂ; ತೊರೆಯೊಳ್ ||

೮. ಮನವೊಲಿದೆಡೆ ಸಂಚರಿಸುಗೆ
ಮನೋಜವಂ ನಿನ್ನ ಕವನವನರಥಮದಕಾಂ |
ಹನನಕನಲ್ಲಂ ಮರೆಯದಿ
ರೆನುವೆಂ ನೀಂತತ್ತ್ವದೊಂದರಿತ್ರವನೆಂದುಂ ||

೯. ಪೊಸತಾಣಂಗಳನಯ್ದುವ
ಕಸುವಂ ನಾ ಕೂ ಡದೆಂಬೆನಾದೊಡೆ, ನವತಾ-
ವ್ಯಸನಂ ಸಲ್ಲದು, ತಾಯ್ನೆಲ
ದುಸಿರಂ ನೀಂ ಮರೆತು ದೂರವಾಗದಿರೆಂದುಂ ||

೧೦. ಕವಿತಾ ನೌಕೆಯ ನಿರ್ವಹ
ಣವಿಧಾನಂ ತೊರೆದು ತೊರೆಗೆ ಧುಮುಕುತುಮೀಜಲ್ ।
ಬುವಿಗೈದಲಕ್ಕುಮಾದೊಡೆ
ಸವಿಯೇನೀರೀತಿ ? ಸೊಗಮೆ ಸಾಧನೆಯಲ್ತೇ ॥

೧೧. ನಕ್ರಾಕುಲ ಜಲನಿಧಿಯೊಳ್
ವಕ್ರಪಥದೆ ಸುಳಿಯಸುಳಿವಿನೆಡೆಯೊಳ್ ನೌಕಾ -
ವಿಕ್ರಮವೇ ಸ್ತವನೀಯಂ
ಸಕ್ರಮ ಸಾಧನೆಗದಾವುದೆಟುಕದು ದಿಟದಿಂ ?

೧೨. ಸ್ವಂತಿಕೆಯ ಬುತ್ತಿಯಂತೆಯೆ
ಸಂತತಮುಲ್ಲಾಸಮೆಂಬ ದೋಣಿಯ ಪದಮುಂ ।
ಕಂತದೆ ನಿನ್ನೊಳ್ ಸಲ್ಗೆ ಸ-
ಮಂತೆಂದೆನುವೆಂ ಪ್ರಯಾಣಕಿದು ಸರಿಯೆಂದುಂ ॥

೧೩. ಉಲ್ಲೋಲಿಪಕಲ್ಲೋಲದ
ತಲ್ಲಣಕಂ ತುಯ್ದು ತೊಯ್ದು ಸಾಗಲಿ ಪಯಣಂ ।
ಸಲ್ಲದು ಚಾಲನಯಂತ್ರಂ,
ಗುಲ್ಲಪ್ಪುದು; ನೈಜಶಕ್ತಿ ಪೊಲ್ಲಮೆನಿಕ್ಕುಂ ॥

೧೪. ಎಂತಿರ್ದೊಡೇಂ ಕವನನೌ
ಕಾಂತರ್ಯಂ, ಮೇಣಪಾರ ಸೌಕರ್ಯಂ, ಶ್ರೀ-
ಮಂತಿಕೆಯುಂ ? ಸಹೃದಯರಂ
ಸಂತರಣಕೆ ಕೊಂಡುಪೋಗದಿರ್ದೊಡೆ ನಿನ್ನಾ ॥

೧೫. ಸಲ್ಲದು ಸಲ್ಲದು ಸಹೃದಯ
ರೆಲ್ಲರನೀ ದೋಣಿಯಲ್ಲಿ ಸಾಗಿಸುವಾಶಾ-
ಸಲ್ಲಪನಂ; ನಿನ್ನಳವಿಗ
ಮುಲ್ಲಾಸದ ಗುರಿಗಮೊಲ್ದು ಬರ್ಪರೆ ಸಾಲ್ಗುಂ ॥

೧೬. ಕವಿನಾವಿಕ ! ಭಾವಿಕಧ್ರುವಂ
ಕವಿತಾನೌಕೆಯನೇರಿದರ್ಗೆ ಧೀ -
ದ್ರವಿಣಂ; ಕಿವಿಮಾತಿದೆಂಬಿನಂ
ಕವನಂ ಷೋಡಶ ಸತ್ಕಲಾತ್ಮಕಂ ॥
- (ವಿಯೋಗಿನೀ ಛಂದಸ್ಸು)